ಕೇಳುವವರು ಗತಿ ಇಲ್ಲ. ಬಾಗಿಲು ಮುಚ್ಚಿಕೊಂಡು ಹೋಗಬೇಕಾಗುತ್ತದೆ. ನೀವು ಹೇಳುತ್ತೀರಿ ಸ್ನಾತಕೋತ್ತರ ವ್ಯಾಸಂಗ ಮುಗಿಸಿಕೊಂಡು ಬಂದವರನ್ನು ಅಥವಾ ಪದೋನ್ನತಿ ಹೊಂದಿದವರನ್ನು ಅಲ್ಲಿಗೆ ಹಾಕುತ್ತೇವೆ ಎಂದು. ಅವರು ಅಲ್ಲಿ ಬರುವುದಿಲ್ಲ. ಬರದೇ ಇದ್ದರೆ ಏನು ಮಾಡುತ್ತೀರಿ? ಎಷ್ಟು ದಿವಸದಲ್ಲಿ ಹಾಕುತ್ತೀರಿ ಎಂಬುದನ್ನು ಸ್ಪಷ್ಟವಾಗಿ ನಮಗೆ ತಿಳಿಸಬೇಕಾಗುತ್ತದೆ.

ಡಾ.ಎಚ್.ಸಿ.ಮಹದೇವಪ್ಪ:- ಸಮ್ಮಾನ್ಯ ಸಭಾಧ್ಯಕ್ಷರೇ, ಹಾಸನ ಜಿಲ್ಲೆಗೆ ಸುಮಾರು 35 ಕಾಂಟ್ರ್ಯಾಕ್ಟ್ ಡಾಕ್ಟರುಗಳನ್ನು ಗ್ರಾಮೀಣ ಪ್ರದೇಶಗಳಿಗೆ ತುಂಬುವುದಕ್ಕೆ ನಾವು ಆರ್ಡರ್ ಮಾಡಿ ಅಪಾಯಿಂಟ್ ಮಾಡಿದ್ದೇವೆ. ಅದರಲ್ಲಿ 78 ಜನ ವರದಿ ಮಾಡಿಕೊಂಡಿದ್ದಾರೆ. ಇನ್ನು 7 ಜನ ಮಾಡಿಕೊಂಡಿಲ್ಲ. 29ನೇ ತಾರೀಖು 11 ಜನ ವೈದ್ಯರುಗಳನ್ನು ಜಿಲ್ಲಾಧಿಕಾರಿಗಳು ಇಂಟರ್‌ವ್ಯೂ ಮಾಡಿ ಕಳುಹಿಸಿಕೊಟ್ಟಿದ್ದಾರೆ. ಇವತ್ತು ಅಥವಾ ನಾಳೆ ಇದನ್ನು ಅಪ್ರೂವ್ ಮಾಡಿ ಅವರಿಗೆ ಕಳುಹಿಸುತ್ತೇವೆ. ಜೊತೆಗೆ ಈಗಾಗಲೇ ಈ ತಿಂಗಳ 15ನೇ ತಾರೀಖು ಗ್ರಾಮೀಣ ಪ್ರದೇಶಗಳಲ್ಲಿ ಖಾಲಿ ಇರತಕ್ಕ ಸುಮಾರು 400 ಹುದ್ದೆಗಳನ್ನು ತುಂಬುವುದಕ್ಕೆ ಲೋಕಸೇವಾ ಆಯೋಗ ಸಂದರ್ಶನವನ್ನು ಪ್ರಾರಂಭ ಮಾಡುತ್ತಿದೆ. ತಕ್ಷಣದಲ್ಲೇ ನಾನು ಕಾರ್ಯಕ್ರಮವನ್ನು ಜಾರಿ ಮಾಡುತ್ತೇನೆ.

ಅಧ್ಯಕ್ಷರು:- ಇದು ಅರಕಲಗೂಡಿಗೆ ಸಂಬಂಧಪಟ್ಟ ಪ್ರಶ್ನೆ. ಸುಮಾರು ಜನ ಕೈ ಎತ್ತಿದರು. ಎಲ್ಲಾ ಕಡೆ ಈ ಸಮಸ್ಯೆ ಇದೆ ಎಂಬುದು ಗೊತ್ತಿದೆ. ಆದರೆ ಪ್ರಶ್ನೆ ಅರಕಲಗೂಡಿಗೆ ಮಾತ್ರ ಸಂಬಂಧಪಟ್ಟಿದ್ದುದು.

ಶ್ರೀ ಎ.ಟಿ.ರಾಮಸ್ವಾಮಿ:- ಈಗಾಗಲೇ ತಿಳಿಸಿದ ಹಾಗೆ ಅರಕಲಗೂಡಿನಲ್ಲಿರುವ ಆಸ್ಪತ್ರೆ ತಾಲ್ಲೂಕು ಕೇಂದ್ರದ ಆಸ್ಪತ್ರೆ. ಸುಮಾರು ಒಂದು ವರ್ಷದಿಂದ ಒಬ್ಬರೇ ವೈದ್ಯಾಧಿಕಾರಿಗಳಿದ್ದಾರೆ. ಹೇಗೆ ನಿರ್ವಹಣೆ ಮಾಡಬೇಕು ನೀವೇ ಹೇಳಿ. ಅಲ್ಲಿಗೆ ಬೇಗ ಒಬ್ಬ ವೈದ್ಯರನ್ನು ತುಂಬಬೇಕು. ಎಷ್ಟು ದಿವಸದಲ್ಲಿ ತುಂಬುತ್ತೀರಿ ಎಂಬುದನ್ನು ಹೇಳಿ. ತಾಲ್ಲೂಕು ಕೇಂದ್ರದಲ್ಲಿ ಒಬ್ಬರು ವೈದ್ಯರಿದ್ದರೆ, ಸಾಕಾಗುತ್ತದೆಯೇ, ತಾವೇ ಹೇಳಿ?

ಡಾ.ಹೆಚ್.ಸಿ.ಮಹದೇವಪ್ಪ:- ಆಗಷ್ಟ್ ತಿಂಗಳ ಮೊದಲ ಅಥವಾ ಎರಡನೇ ವಾರದಲ್ಲಿ ತುಂಬುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಜೊತೆಗೆ ಈಗಾಗಲೇ ತಮ್ಮ ಜಿಲ್ಲೆಯಿಂದ 11 ಜನ ವೈದ್ಯಾಧಿಕಾರಿಗಳ ಸಂದರ್ಶನ ಮಾಡಿ ಜಿಲ್ಲಾಧಿಕಾರಿಗಳು ನನಗೆ ಪಟ್ಟಿಯನ್ನು ಕಳುಹಿಸಿದ್ದಾರೆ. ಅದನ್ನು ಇವತ್ತು ಅಥವಾ ನಾಳೆ ಅಪ್ರೂವ್ ಮಾಡಿ ವೈದ್ಯರನ್ನು ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ:- ಮೈಸೂರು ನಗರದ ಕುವೆಂಪು ನಗರದ ತೊಣಚಿಕೊಪ್ಪಲ್‌ಗೆ ಸಾರ್ವಜನಿಕ ಆಸ್ಪತ್ರೆ ಮಂಜೂರು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 54 (461)

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ (ಚಾಮರಾಜ):- ಮಾನ್ಯ ಆರೋಗ್ಯ ಮತ್ತು

ಕುಟಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮೈಸೂರು ನಗರದ ಕುವೆಂಪು ನಗರ ತೊಣಚಿಕೊಪ್ಪಲ್‌ಗೆ ಸಾರ್ವಜನಿಕ ಆಸ್ಪತ್ರೆ ಮಂಜೂರು ಮಾಡಬೇಕೆಂದು ಕೋರಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟಂಬ ಕಲ್ಯಾಣ ಸಚಿವರು):-

ಅ) ಡಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ಮಾನ್ಯ ಅಧ್ಯಕ್ಷರೇ, ಉತ್ತರ ಬಹಳ ಮನಮೋಹಕವಾಗಿದೆ. ಉತ್ತರದಲ್ಲಿರುವ 'ಡಲ್ಲ' ಎನ್ನುವ ಪದ ಯಾವ ಪುಸ್ತಕದಲ್ಲಿದೆ ಎನ್ನುವುದು ಯಾವ ಪುಸ್ತಕದಲ್ಲಿದೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ, ಉದ್ಭವಿಸುವುದಿಲ್ಲ, 'ಡಲ್ಲ' ಎಂದರೆ ಏನು? ಹೆಚ್.ಎನ್.ಶಂಕರಲಿಂಗೇಗೌಡ ಎನ್ನುವವರು ಯಾರು? ಇಲ್ಲಿ ಹೆಚ್.ಎಸ್.ಶಂಕರಲಿಂಗೇಗೌಡ ಎಂದು ಹೇಳಿರುವುದು. ಇದೇನು? ಆಟೋ ಡ್ರೈವರ್‌ನ್ನು ಬಸ್ ಡ್ರೈವರ್ ಮಾಡಿದ ಹಾಗೆ, ಕೆಲವು ಆಟ ಆಡುವ ಹುಡುಗರನ್ನು ಟೈಪಿಸ್ಟ್ ಮಾಡಿದ ಹಾಗೆ ಆಗಿದೆ. 'ಡಲ್ಲ' ಎನ್ನುವ ಪದ ಏನು? ಇದು ಯಾವ ಡಿಕ್ಷನರಿಯಲ್ಲಿದೆ? ಇದರ ಅರ್ಥ ಏನು? ಒಬ್ಬ ಗೌರವಾನ್ವಿತ ಸದಸ್ಯ ಪ್ರಶ್ನೆಗಳನ್ನು ಕೇಳಿದರೆ ಅದಕ್ಕೆ ಉತ್ತರಿಸುವಾಗ ಇಲ್ಲಿ ಮಾಡಿರುವಂತಹ ತಪ್ಪನ್ನು ಅಧಿಕಾರಿಗಳು ಸರಿಯಾಗಿ ಗಮನಿಸಬೇಕು. ಅದನ್ನು ಗಮನಿಸದೆ ಏಕಾಏಕಿ ಎತ್ತು ಈಯಿತು ಎಂದರೆ ಕೊಟ್ಟಿಗೆಗೆ ಕಟ್ಟು ಎಂದಹಾಗೆ ಆಯಿತು. ಎತ್ತು ಈಯೋದೂ ಇಲ್ಲ, ಕೊಟ್ಟಿಗೆಗೆ ಕಟ್ಟುವ ಹಾಗೆಯೂ ಇಲ್ಲ.

ಅಧ್ಯಕ್ಷರು:- ನನಗೆ ಗೊತ್ತಿತ್ತು, ನೀವು, ಪವಾರ್ ಎಲ್ಲಾ ಮಾತನಾಡುವಾಗ ಹೀಗೆ ಎಲ್ಲಾ ಹೇಳುತ್ತೀರಿ ಎಂದು.

ಶ್ರೀ ಸಿ.ಆರ್.ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ಬಿರಿಯಾನಿಗೆ ಉಪಯೋಗಿಸುವ ಮಾಂಸಕ್ಕೆ ಡೆಲ್ಲಿ ಎಂದು ಹೇಳುತ್ತೇವೆ, ಆದರೆ ಡಲ್ಲ ಎನ್ನುವ ಪದ ನನಗೆ ಗೊತ್ತಿಲ್ಲ.

ಅಧ್ಯಕ್ಷರು:- ಇದು 'ಇಲ್ಲ' ಎಂದು ಹೇಳುವುದಕ್ಕೆ 'ಡಲ್ಲ' ಎಂದು ಆಗಿದೆ, ಇದು ನೆಗ್ಲಿಜೆನ್ಸಿಯಿಂದ ಆಗಿದೆ. ಹಾಗೆ ಹೆಚ್.ಎನ್.ಶಂಕರಲಿಂಗೇಗೌಡ ಎಂದು ಮನಸ್ಸಿಗೆ ಬಂದ ಹಾಗೆ ಮಾಡುತ್ತಾರೆ. ಇದರ ಬಗ್ಗೆ, ಸಂಬಂಧಪಟ್ಟವರು ಗಮನಹರಿಸಬೇಕು.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ಮಾನ್ಯ ಅಧ್ಯಕ್ಷರೇ, ಮೈಸೂರು ನಗರದ ಮೂರೂವರೆ ಲಕ್ಷ ಜನಸಂಖ್ಯೆ ಇದ್ದಾಗ ಒಂದು ಕೆ.ಆರ್.ಆಸ್ಪತ್ರೆ ಇತ್ತು, ಇವತ್ತು ಕೆ.ಆರ್.ಆಸ್ಪತ್ರೆಯ ಕರ್ಮಕಾಂಡ ಹೇಳುವುದಕ್ಕೆ ಹೋದರೆ ಅದನ್ನು ಪುಟಗಟ್ಟಲೆ

ಬರೆಯಬಹುದು.

ಅಧ್ಯಕ್ಷರು:- ಅದನ್ನು ಈಗ ಹೇಳಬೇಡಿ, ಅದಕ್ಕೆ ಬೇರೆ ಸಮಯ ಇದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ಮೈಸೂರು ನಗರದ ಬಡಾವಣೆಗಳು ಬೃಹತ್ತಾಗಿ ಬೆಳೆಯುತ್ತಿದೆ. ಜನಸಂಖ್ಯೆ 10 ಲಕ್ಷವಾಗಿದ್ದು ನಾಗಾಲೋಟದಿಂದ ಏರುತ್ತಿದೆ. ಇವತ್ತಿನ ದಿವಸ 12-13 ಕಿಲೋಮೀಟರ್‌ನಿಂದ ನಿರ್ಗತಿಕವಾಗಿರತಕ್ಕಂಥ ಕೆ.ಆರ್.ಆಸ್ಪತ್ರೆಗೆ ಬರುವುದಕ್ಕೆ ಜನ ಅಷ್ಟು ಇಷ್ಟ ಪಡುತ್ತಾ ಇಲ್ಲ. ಬಡಾವಣೆಯಲ್ಲಿ ಇರತಕ್ಕಂಥ ಮಧ್ಯಮ ವರ್ಗದ ಜನ, ಕೆಳ ಮಧ್ಯಮ ವರ್ಗದ ಜನ ತಮ್ಮ ಖಾಯಿಲೆಯನ್ನು ವಾಸಿ ಮಾಡಿಕೊಳ್ಳುವುದಕ್ಕೆ ಖಾಸಗೀ ವೈದ್ಯರ ಹತ್ತಿರ ಹೋಗುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಈ ಒಂದು ಪ್ರಶ್ನೆಯನ್ನು ನಾನು ಅಲ್ಲಿರತಕ್ಕಂಥ ಸಾರ್ವಜನಿಕ ಹಿತದೃಷ್ಟಿಯಿಂದ ಕೇಳಿರತಕ್ಕಂಥಾದ್ದು. ಆರೋಗ್ಯ ಸಚಿವರು ತಾವೇ ಮುಂದಾಗಿ ಇದನ್ನು ಮಾಡಬೇಕು. ನಿಜ ಎನ್ನುವಂಥಾದ್ದನ್ನು ಇಲ್ಲಿ ಸರ್ವೇ ಮಾಡಿಸಿ ಹೇಳಿಸಬೇಕಾಗಿತ್ತು. ಈಗ ನಿಜವಾಗಿ ವಸ್ತುಸ್ಥಿತಿ ಹಾಗೂ ವಾಸ್ತವಾಂಶವನ್ನೂ ಅರ್ಥಮಾಡಿಕೊಳ್ಳಬೇಕು.

ಅಧ್ಯಕ್ಷರು:- ಈಗ ಅತ್ಯಂತ ಕಾವ್ಯಮಯವಾಗಿ, ಯಾರಿಗೂ ಅರ್ಥವಾಗದ ರೀತಿಯಲ್ಲಿ ಬಹಳ ವೇಗವಾಗಿ ಅವರು ಕೇಳಿರತಕ್ಕಂಥ ಎಲ್ಲಾ ಉಪಪ್ರಶ್ನೆಗಳಿಗೆ ತಾವು ಕನ್ನಡದಲ್ಲಿ ಉತ್ತರ ಕೊಡಬೇಕು.

ಡಾ.ಹೆಚ್.ಸಿ.ಮಹದೇವಪ್ಪ:- ಬೆರಳಚ್ಚು ಮಾಡುವಾಗ ತಪ್ಪಾಗಿರುವುದಕ್ಕೆ ಮಾನ್ಯ ಸದಸ್ಯರ ಮನಸ್ಸಿಗೆ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುವುದರ ಜೊತೆಗೆ ಆ ರೀತಿ ಇನ್ನು ಮುಂದೆ ಆಗದ ಹಾಗೆ ನೋಡಿಕೊಳ್ಳುತ್ತೇನೆ. ಜೊತೆಗೆ ಅವರು ಹೇಳಿರತಕ್ಕಂಥ ಆಸ್ಪತ್ರೆ ನಗರ ಕಾರ್ಪೊರೇಷನ್ ವ್ಯಾಪ್ತಿಗೆ ಬರುವುದರಿಂದ ಮೈಸೂರಿನ ಕಾರ್ಪೊರೇಷನ್ ಅದರ ಬಗ್ಗೆ ಕ್ರಮವನ್ನು ಕೈಗೊಳ್ಳಬೇಕಾಗಿರುವುದರಿಂದ ಅದಕ್ಕೆ ಸರ್ಕಾರದ ವತಿಯಿಂದ ಮಾಡುವುದಕ್ಕೆ ಬರುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ನಮ್ಮನ್ನು ಇಲ್ಲಿಗೆ ಪ್ರಬುದ್ಧ ಮತದಾರರು ಓಟು ಹಾಕಿ ಗೆಲ್ಲಿಸಿದ್ದಾರೆ. ಆ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಎಲ್ಲಾ ನಾಗರೀಕ ಸೌಲಭ್ಯವನ್ನು ಕೊಡತಕ್ಕಂಥ ದೃಷ್ಟಿಯನ್ನು ನೀವು ಅರ್ಥಮಾಡಿಕೊಂಡಿಲ್ಲ ಹಾಗೂ ತಿಳಿದುಕೊಂಡಿಲ್ಲ. ನಿಮ್ಮ ಸಿಬ್ಬಂದಿಯನ್ನು ವಿಚಾರಿಸಿಲ್ಲ. ಸರಿಯಾದ ಉತ್ತರವನ್ನು ಕೊಡುವಾಗ ವಾಸ್ತವಾಂಶವನ್ನು ತಿಳಿದುಕೊಂಡು ಉತ್ತರ ಕೊಡಬೇಕು. ಆ ವಿಭಾಗಕ್ಕೆ ಒಂದು ಆಸ್ಪತ್ರೆ ಬೇಕು. ಅಲ್ಲಿಗೆ ಮಂಜೂರು ಮಾಡಿ ಕೊಡುತ್ತೀರೋ ಇಲ್ಲವೋ ಎಂದು ಹೇಳಬೇಕು.

ಡಾ.ಹೆಚ್.ಸಿ.ಮಹದೇವಪ್ಪ:- ಮಾನ್ಯ ಅಧ್ಯಕ್ಷರೆ, ನಗರದ ಎಲ್ಲಾ ಪ್ರದೇಶಗಳಿಗೆ ಆಸ್ಪತ್ರೆ ಬೇಕು ಎಂದು ಜನ ಒತ್ತಾಯ ಮಾಡುತ್ತಾರೆ. ನಗರಸಭೆಯ ವ್ಯಾಪ್ತಿಗೆ ಅದು ಬರುವುದರಿಂದ ಆರೋಗ್ಯ ಶುಚಿತ್ವದ ಬಗ್ಗೆ ನಗರಪಾಲಿಕೆಯೆ ಹೆಚ್ಚು ಆಸಕ್ತಿ ವಹಿಸಬೇಕು.

ಇದು ಅದರ ಕಾರ್ಯವ್ಯಾಪ್ತಿಯಲ್ಲಿ ಬರುವುದರಿಂದ, ಅಲ್ಲಿ ಕ್ರಮ ಕೈಗೊಳ್ಳಬೇಕು. ಅದರಲ್ಲೂ ಆಸ್ಪತ್ರೆ ಬೇಕು ಎಂದು ಯಾವ ಶಿಫಾರಸ್ಸು ಕೂಡ ಸರ್ಕಾರಕ್ಕೆ ಬಂದಿಲ್ಲವಾದ್ದರಿಂದ, ನಗರಸಭೆಯೇ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ನಮ್ಮ ಇಲಾಖಾ ವತಿಯಿಂದ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಇ.ಮಾರುತಿರಾವ್ ಪವಾರ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳುತ್ತಿರುವ ಪ್ರಕಾರ ಅವರು ಪ್ರಾಥಮಿಕ ಆರೋಗ್ಯ ಕೇಂದ್ರದ ಬಗ್ಗೆ ಮಾತನಾಡುತ್ತಿದ್ದಾರೆ. ಅದು ಕಾರ್ಪೋರೇಷನ್‌ಗೆ ಸಂಬಂಧಪಡುತ್ತದೆ. ಸನ್ಮಾನ್ಯ ಮಿತ್ರರು ಕೇಳುತ್ತಿರುವಂಥಾದ್ದು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯನ್ನು ಮಾಡಿಕೊಡಬೇಕು ಎಂದು. ಪ್ರೈಮರಿ ಸೆಂಟರ್ ಮಾತ್ರ ಕಾರ್ಪೋರೇಷನ್‌ಗೆ ಬರುತ್ತದೆ. ಸಾರ್ವಜನಿಕ ಆಸ್ಪತ್ರೆ ಸರ್ಕಾರಕ್ಕೆ ಬರುತ್ತದೆ.

ಅಧ್ಯಕ್ಷರು:- ತಾವು ಕೇಳುತ್ತಿರುವುದು ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯನ್ನು ಎಷ್ಟು ಹಾಸಿಗೆಗಳು ಬೇಕೆಂದು ಕೇಳುತ್ತಿದ್ದೀರಿ?

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ:- ನೂರು ಹಾಸಿಗೆ ಅಥವಾ 50 ಹಾಸಿಗೆಗಳುಳ್ಳ ಆಸ್ಪತ್ರೆಯನ್ನು ಕೇಳುತ್ತಿದ್ದೇವೆ. ಪ್ರೈಮರಿ ಹೆಲ್ತ್ ಸೆಂಟರ್‌ಗೂ, ಸಾರ್ವಜನಿಕ ಆಸ್ಪತ್ರೆಗೂ ವ್ಯತ್ಯಾಸ ಇದೆ. ಅದು ಮಾನ್ಯ ಸಚಿವರಿಗೆ ಅರ್ಥವಾಗಿಲ್ಲವೆಂದು ಕಾಣುತ್ತದೆ.

ಡಾ.ಹೆಚ್.ಸಿ.ಮಹದೇವಪ್ಪ:- ಮಾನ್ಯ ಅಧ್ಯಕ್ಷರೇ, ನಗರಸಭೆಯವರನ್ನು ಹಾಗೂ ಮಾನ್ಯ ಶಾಸಕರನ್ನು ಕರೆದು ಚರ್ಚೆ ಮಾಡಿ ಇದನ್ನು ಮಾಡುವುದಕ್ಕೆ ಸಾಧ್ಯವಿದೆಯೇ ಎಂದು ನೋಡುತ್ತೇನೆ. ಸದಸ್ಯರು ಅದೇ ಜಿಲ್ಲೆಯವರೇ ಇದ್ದಾರೆ, ಹಾಗೂ ಅದೇ ಜಿಲ್ಲೆಯ ಇತರ ಸದಸ್ಯರನ್ನು ಅಲ್ಲಿ ಕರೆದು ಕುಳಿತು ಚರ್ಚೆ ಮಾಡೋಣ.

ಅಧ್ಯಕ್ಷರು:- ನೀವು, ನಗರಪಾಲಿಕೆಯವರು, ಮಾನ್ಯ ಮಂತ್ರಿಗಳು ಎಲ್ಲಾ ಸೇರಿ ಒಂದು ನಿರ್ಣಯ ಮಾಡಿ.

ಅಧ್ಯಕ್ಷರು:- ನಿಮ್ಮ ಪ್ರಶ್ನೆ ಸಂಖ್ಯೆ:57 (370) ಲೋಕೋಪಯೋಗಿ ಮಂತ್ರಿಗಳು ಉತ್ತರ ನೀಡಬೇಕಾಗಿರುವ ದಿವಸ ಕೊಡುತ್ತಾರೆ. ಪ್ರಶ್ನೆಯನ್ನು ಮೊದಲು ಬೇರೆ ಇಲಾಖೆಗೆ ಅಡ್ರೆಸ್ ಮಾಡಿದ್ದರು. ಈಗ ಟ್ರಾನ್ಸ್‌ಫರ್ ಆಗಿದೆ. ಅದಕ್ಕೆ ಉತ್ತರ ಕೊಡಬೇಕಾದ ಜವಾಬ್ದಾರಿ ಲೋಕೋಪಯೋಗಿ ಮಂತ್ರಿಗಳಿಗೆ ಇರುತ್ತದೆ. ಆ ಮಂತ್ರಿಗಳು ತಮ್ಮ ಇಲಾಖೆಯ ಪ್ರಶ್ನೆಗಳಿಗೆ ಉತ್ತರಿಸಬೇಕಾದ ದಿವಸ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ:- ಅಂದು ಆ ಪ್ರಶ್ನೆ ಬರುತ್ತದೆ ಅಂದರೆ ತುಂಬಾ ಒಳ್ಳೆಯದು. ಏಕೆಂದರೆ ಅಲ್ಲಿ ನಡೆದಿರುವ ಕೆಲಸ ನೋಡಿದರೆ ಉತ್ತರವೇ ಬರುವುದಿಲ್ಲ ಎಂದು ಕಾಣುತ್ತದೆ.

ವಿಷಯ:- ರಾಜ್ಯದಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ಕೈಗೊಂಡಿರುವ ನೀರಿನ ಯೋಜನೆಗಳು.